# ಆಹಾ ಸುದ್ದಿ!

★ ಸಸಿತೋಟ




ಇಂಗ್ಲೆಂಡ್‌ನ 'ಜಸ್ಟ್ ಈಟ್' ಆನ್‌ಲೈನ್ ತಿನಿಸುಗಳ ಬೇಡಿಕೆ ಪೂರೈಸುವ ಕಂಪೆನಿ ಸಿದ್ಧಪಡಿಸಿರುವ 'ಶೇರಿಂಗ್' ಉಡುಪಿದು. ಒಬ್ಬೊಬ್ಬರಿಗೂ ಒಂದೊಂದು ತೋಳು, ಮಧ್ಯದ ಒಂದು ಕಾಲನ್ನು ಇಬ್ಬರೂ ಹಂಚಿಕೊಳ್ಳಬೇಕು. ವಸ್ತ್ರದ ಅಭಾವದಿಂದ ತುಂಡು ಉಡುಪು ಧರಿಸುವವರು ಮೈಮುಚ್ಚುವ ಈ ಉಡುಪಿನ ಪ್ರಯೋಗ ಮಾಡಬಹುದು, ಪಾರ್ಟ್ನರ್ ಸಿಕ್ಕರೆ.





ಸೈಬೀರಿಯದಲ್ಲಿ ರನ್‌ವೇನಲ್ಲಿ ಹಿಮದಲ್ಲಿ ಹೂತುಹೋದ ವಿಮಾನವನ್ನು ಪ್ರಯಾಣಿಕರೇ ಇಳಿದು ತಳ್ಳಬೇಕಾಯಿತು. ಅದೂ ಮೈನಸ್ 52 ಡಿ. ಸೆ. ಶೀತವಿದ್ದಾಗ. 30 ಟನ್ ತೂಕದ ವಿಮಾನವನ್ನು ತಳ್ಳಲು 70 ಮಂದಿ ಬಲ ಪ್ರಯೋಗ ಮಾಡಬೇಕಾಯ್ತಂತೆ. ಇಲ್ಲದಿದ್ದರೆ ಸೈಬೀರಿಯ ರಾಜಧಾನಿ ತಲುಪುವುದಿರಲಿ, ಅಲ್ಲೇ ಕೂತರೆ ಅವರೇ ಹಿಮಗಟ್ಟಬೇಕಾಗಿತ್ತು. ಹಳ್ಳಿಯ ರಸ್ತೆಯಲ್ಲಿ ಬಸ್ ತಳ್ಳಿದ ಅನುಭವ ವಿಮಾನ ತಳ್ಳುವಾಗ ಪ್ರಯೋಜನಕ್ಕೆ ಬಂದಿರಬಹುದು.

ಗುಂಪಿನಲ್ಲಿದ್ದಾಗ ಯಾರಾದರೂ 'ಗ್ಯಾಸ್' ಬಿಟ್ಟರೆ ಮೂಗು ಮುಚ್ಚಿಕೊಳ್ಳುವ ಹಾಗೂ ಇಲ್ಲ, ಅದು ಶಿಷ್ಟಾಚಾರಕ್ಕೆ ಅವಮಾನ ಮಾಡಿದಂತೆ. ಹಾಗಂತ ಸಹಿಸಿಕೊಳ್ಳುವ ಹಾಗೂ ಇಲ್ಲ. ಅದಕ್ಕೆಂದೇ ಫ್ರಾನ್ಸ್‌ನ ಕ್ರಿಶ್ಚಿಯನ್ ಪೋಯಿನ್‌ಶೋವೆಲ್ ಎಂಬಾತ ಗ್ಯಾಸ್‌ಗೆ ಫ್ರೆಂಚ್ ಸುಗಂಧ ಲೇಪಿಸುವ ಮಾತ್ರೆ ಕಂಡು ಹಿಡಿದಿದ್ದಾನಂತೆ. 'ಕ್ರಾಫ್ಟಿ ಇಂಪ್' ಎಂಬ ಈ ಮಾತ್ರೆ ಸೇವಿಸಿದರೆ ಸಾಕು, ನೀವು ಬಿಡುವ ಗ್ಯಾಸ್ ಚಾಕೊಲೇಟ್, ರೋಸ್ ಮೊದಲಾದ ಸುಗಂಧ ಬೀರುವುದಂತೆ. ಗ್ಯಾಸ್ ಸಮಸ್ಯೆ ಕಾರಣ ಒಡ್ಡಿ ವಿಚ್ಛೇದನ ಕೋರುವವರಿಗೆ ಮಾತ್ರ ಇದು ಅಡ್ಡಿಯಾಗಬಹುದು.



ಲಂಡನ್ನಿನ ಆಯ್ಡಾ ವಿಲಿಯಮ್ಸ್ ತನ್ನ 23 ಇಂಚು ಉದ್ದದ ಉಗುರುಗಳನ್ನು ಇತ್ತೀಚೆಗೆ ಪ್ರದರ್ಶಿಸಿದಳು. 'ರಿಪ್ಲೇಸ್ ಬಿಲಿವ್ ಇಟ್ ಆರ್ ನಾಟ್: ರಿಯಲಿಟಿ ಶಾಕ್' ಪುಸ್ತಕದಲ್ಲಿ ಸ್ಥಾನ ಪಡೆದಿರುವ 56ರ ಹರೆಯದ ಈಕೆ ಉಂಡಿದ್ದೆಲ್ಲವೂ ಉಗುರಿಗೇ ಹೋಗುತ್ತದೆ ಎನ್ನುವ ಹಾಗೂ ಇಲ್ಲ. ಏಕೆಂದರೆ ಊಟವನ್ನು ಅದು ಹೇಗೆ ಮಾಡುತ್ತಾಳೋ!

ಎತ್ತರದ ಹಿಮ್ಮಡಿ ಚಪ್ಪಲಿ ಧರಿಸಿದ ನೀರೆ ಬಳುಕುವ ಹೆಜ್ಜೆ ಹಾಕಬಲ್ಲಳು, ಹಿಂಭಾಗ ಹೆಚ್ಚು ಆಕರ್ಷಕವಾಗಿ ಕಾಣುವಂತೆ ಓಡಾಡಬಲ್ಲಳು ಎಂಬುದು ಹಳೆಯ ಅಧ್ಯಯನದ ಸಾರ. ಆದರೆ ಎತ್ತರದ ಹಿಮ್ಮಡಿಯ ಚಪ್ಪಲಿ ಧರಿಸಿದವರಿಗೆ ಪುರುಷರು ನೆರವು ನೀಡಲು ಮುಂದೆ ಬರುತ್ತಾರೆ ಎನ್ನುತ್ತದೆ ಹೊಸ ಅಧ್ಯಯನ. ಫ್ರಾನ್ಸ್‌ನ ವಿಶ್ವವಿದ್ಯಾನಿಲಯವೊಂದು ಈ ಬಗ್ಗೆ ಸಮೀಕ್ಷೆ ನಡೆಸಿದೆಯಂತೆ. ಆಕರ್ಷಣೆಯನ್ನು ಉತ್ಸಾಹ ಹಿಂಬಾಲಿಸುತ್ತದೆ ಎಂಬುದನ್ನು ಸಾಬೀತುಪಡಿಸಲು ಸಮೀಕ್ಷೆಯೇ ಅಗತ್ಯವಿತ್ತೆ?



ಇದರ ಹೆಸರು ಫ್ರಿಡಾ. ಈ ನಾಯಿ ಸ್ಯಾನ್‌ಫ್ರಾನ್ಸಿಸ್ಕೋದ ಮೇಯರ್ ಆಗಿ ಒಂದು ದಿನ ಸಕಲ ಗೌರವ ಪಡೆದಿದೆ. ನಗರದಲ್ಲಿ ಪ್ರಾಣಿಗಳಿಗೆ ವಸತಿ ಒದಗಿಸುವ ಉದ್ದೇಶಕ್ಕೆ ನೆರವು ಕೋರಲು ಈ ನಡೆಯಂತೆ. ಏನೇ ಇರಲಿ, ಹುದ್ದೆಗೆ ಗೌರವ, ವ್ಯಕ್ತಿಗಲ್ಲ ಎಂಬುದನ್ನು ಫ್ರಿಡಾ ತೋರಿಸಿಕೊಟ್ಟಿದೆ.